Construction of a Mini Stadium at Holenarasipur Town

1269. SRI H. D. DEVE GOWDA (Holenarasipur).—Will the Minister of State for Information and Youth Services be pleased to state.—

(*a*) whether the Government has received any representation to sanction a Mini Stadium at Holenarasipur Town ;

(*a*) if so, the action taken to sanction the same ?

SRI K. GANGADHAR (Minister of State for Information and Youth Services).—

(*b*) Government has received a representation on 16-2-1982 for administrative sanction for a Mini Stadium at Holenarasipur Town.

(*b*) After completion of stadium at District Level, construction of stadia at Taluk will be taken up.

ಶ್ರೀ ಹೆಚ್. ಡಿ. ದೇವೇಗೌಡ.—ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಿದ ನಂತರ ತಾಲೂಕು ಮಟ್ಟದಲ್ಲಿ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ. ಈ ಮಿನಿ ಸ್ಟೇಡಿಯಂಗೆ ಎಷ್ಟು ಹಣ ಖರ್ಚು ಮಾಡುತ್ತೀರಿ ಎಂದು ಹೇಳುತ್ತೀರಾ ?

ಶ್ರೀ ಕೆ. ಗಂಗಾಧರ್.—ಮಿನಿ ಸ್ಟೇಡಿಯಂಗೆ ಎಷ್ಟು ಖರ್ಚಾಗುತ್ತದೆ ಎನ್ನುವ ಅಂದಾಜು ನಮ್ಮಲ್ಲಿ ಇಲ್ಲ. ಅದಕ್ಕೆ ನಾವು ಸಂಬಂಧಪಟ್ಟ ಟೆಕ್ನಿಕಲ್ ಅಧಿಕಾರಿಗಳಿಂದ ಮಾಹಿತಿ ತರಿಸಬೇಕು. ಇನ್ನು ಹೊಳೇನರಸಿಪುರದಲ್ಲಿ ಮಿನಿ ಸ್ಟೇಡಿಯಂ ಕಟ್ಟುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೊಳೇನರಸಿಪುರಕ್ಕೆ ಬಂದಾಗ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂದು ಮನವಿಪತ್ರದಲ್ಲಿ ನೋಡಿ ತಿಳಿದು ಕೊಂಡಿದ್ದೇನೆ. ಅವರು ಆಶ್ವಾಸನೆ ಕೊಟ್ಟಿರುವುದರಿಂದ ನಾನು ಅದನ್ನು ಇನ್‌ಪೆಕ್ಟಿಗೇಶನ್ ಮಾಡುವುದಕ್ಕೆ ಆರಂಭ ಮಾಡಿದ್ದೇನೆ. ಸರಿಯಾದ ಜಾಗ ಸಿಕ್ಕಿಲ್ಲ. ಮಾನ್ಯ ಸದಸ್ಯರು ಜಾಗವನ್ನು ಒದಗಿಸಿ ಕೊಟ್ಟರೆ ಈ ಕೆಲಸವನ್ನು ಬಹಳ ಬೇಗ ಮಾಡಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕೆ ಬೇಕಾದಂತಹ ೫ ಎಕರೆ, ೩ ಎಕರೆ ಜಾಗವನ್ನು ರೆಡಿ ಮಾಡಿ ಇಟ್ಟಿದ್ದೇವೆ. ಯಾವುದು ಬೇಕೋ ಅದನ್ನು ತೆಗೆದುಕೊಳ್ಳಿ. ಜಾಗದ ಪ್ರಶ್ನೆಯೇ ಇಲ್ಲ. ಜೂನಿಯರ್ ಕಾಲೇಜಿಗೆ, ಮತ್ತು ಪ್ರಥಮದರ್ಜೆ ಕಾಲೇಜಿಗೆ ಮತ್ತು ಸ್ಟೇಡಿಯಂಗೆ ಜಾಗವನ್ನು ರೆಡಿ ಮಾಡಿ ಇಟ್ಟಿದ್ದೇವೆ. ಯಾವಾಗ ಬೇಕಾದರೂ ಅದನ್ನು ತೆಗೆದುಕೊಳ್ಳಿ. ನಾವು ಹಿಂದೆ ಸರಿಯುವುದಿಲ್ಲ. ತಾವು ಕೆಲಸವನ್ನು ಪ್ರಾರಂಭ ಮಾಡಬೇಕು.

ಶ್ರೀ ಕೆ. ಗಂಗಾಧರ್.—ಇದರ ಬಗ್ಗೆ ಚರ್ಚೆಮಾಡಿದ್ದೇವೆ. ೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಈ ವರ್ಷ ತೆಗೆದಿಟ್ಟಿದ್ದೇವೆ. ಹಣಕಾಸಿನ ಮಂತ್ರಿಗಳು ಮತ್ತು ನಾನು ಈ ಬಗ್ಗೆ ಚರ್ಚೆಮಾಡಿ ಈ ವರ್ಷ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸಿಕೊಡುತ್ತೇವೆ.

ಶ್ರೀ ರಾಮ್‌ದೇವ್.—ಈ ವರ್ಷ ಭಾರತದಲ್ಲಿ ಬಹಳ ವಿಶೇಷವಾದಂತಹ ವರ್ಷ. ೩೦ ವರ್ಷಗಳ ನಂತರ ಏಷಿಯನ್ ಗೇಮ್ಸ್ ನಡೆಯುತ್ತಿದೆ. ಈ ಸಂಬಂಧದಲ್ಲಿ ಯುವಜನ ಮಂತ್ರಿಗಳು, ಅವರು ಯುವಕರು, ಈ ರಾಜ್ಯದಲ್ಲಿ ಅದರ ಜ್ಞಾಪಕಾರ್ಥವಾಗಿ, ಸ್ಮರಣಾರ್ಥವಾಗಿ ವಿಶೇಷವಾದ ಕಾರ್ಯಕ್ರಮ ವೇನಾದರೂ ರೂಪಿಸಿದ್ದೀರಾ ?

ಶ್ರೀ ಕೆ. ಗಂಗಾಧರ್.—ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕದಿಂದ ಆಯ್ಕೆಯಾದ ಕ್ರೀಡಾಪಟುಗಳಿಗೆ ಮೂರು ನೂರು ರೂಪಾಯಿಗಳನ್ನು ಡಯಟ್ ಅಲೋಯೆನ್ಸ್ ಎಂದು ಕೊಡಲಿದ್ದೇವೆ. ಅಲ್ಲದೆ ಅದನ್ನು ವೀಕ್ಷಣೆ ಮಾಡುವುದಕ್ಕೆ ಶಾಸಕರ ತಂಡ ಮತ್ತು ಕ್ರೀಡಾಪಟುಗಳನ್ನು ಕರೆದು ಕೊಂಡು ಹೋಗುವ ಅಭಿಪ್ರಾಯ ಸರ್ಕಾರಕ್ಕಿದೆ. ಅಲ್ಲದೆ, ಅಲ್ಲಿ ಬಹುಮಾನ ಪಡೆದಂತಹ ಕರ್ನಾಟಕದ

ಕ್ರೀಡಾಪಟುಗಳಿಗೆ ಹೆಚ್ಚಿನ ಪುರಸ್ಕಾರ ಕೊಡುವ ಮತ್ತು ಬಹುಮಾನ ಕೊಡುವ ಅಭಿಪ್ರಾಯ ಇಟ್ಟು ಕೊಂಡಿದ್ದೇವೆ. ಈ ವಿಚಾರವನ್ನು ಈ ಸದನದಲ್ಲಿ ಕೆಲವೇ ದಿನಗಳಲ್ಲಿ ಅನೌನ್ಸ್ ಮಾಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಉತ್ತರದಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರೀಡಾಗಾರರ ನಿರ್ಮಾಣ ಕಾರ್ಯ ಪೂರ್ತಿಗೊಳಿಸಿದ ನಂತರ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಗಾರದ ನಿರ್ಮಾಣ ಕಾರ್ಯವನ್ನು ಕೈಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಹೊಳೆನರಸೀಪುರ ಕ್ಷೇತ್ರದಲ್ಲಿ ಕುಸ್ತಿಪಟುಗಳು ಬಹಳ ಜನ ಇದ್ದಾರೆಂದು ಕೇಳಿದ್ದೇನೆ. ಅವರಿಗೆ ಅನುಕೂಲವಾಗುವಂತೆ ಗರಡಿ ಮನೆಗಳನ್ನು ಏನಾದರೂ ಮಂಜೂರು ಮಾಡುತ್ತೀರಾ ?

ಶ್ರೀ ಕೆ. ಗಂಗಾಧರ.—ಕುಸ್ತಿಪಟುಗಳಿಗೆ ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿನಲ್ಲಿ ಗರಡಿ ಮನೆಗಳನ್ನು ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಈಗಾಗಲೇ ೩೬ ಗರಡಿ ಮನೆಗಳನ್ನು ಮಾಡಿದ್ದೇವೆ. ೧೯೮೩ನೇ ಸಾಲಿನಲ್ಲಿ ೩೬ ಗರಡಿ ಮನೆಗಳನ್ನು ಮಾಡುತ್ತೇವೆ, ಆಗ ನಾವು ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಶೇರ್‌ಖಾನ್.—ನಿಮ್ಮ ಡಿಸ್ಟ್ರಿಕ್ಟ್ ಕಡೆ ನಿಗಾ ಜಾಸ್ತಿ ಹೋಗುತ್ತದೆ, ನಮ್ಮ ಕಡೆ ಸ್ವಲ್ಪ ನೋಡಬೇಕು. ಸ್ಟೇಡಿಯಂ ಕಟ್ಟುವ ಬಗ್ಗೆ ಗುಲ್ಬರ್ಗ ಹೆಸರನ್ನೇ ತೆಗೆದುಕೊಂಡಿಲ್ಲ. ನಾವು ಜಾಗ ಕೊಟ್ಟರೆ ನೀವು ಕಟ್ಟಿಸುತ್ತೀರಾ. ಗುಲ್ಬರ್ಗ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಜಾಗ ಕೊಡಲಿಕ್ಕೆ ತಯಾರಿದ್ದೇವೆಂದು ಆನ್ ದಿ ಫ್ಲೋರ್ ಆಶ್ಯೂರೆನ್ಸ್ ಕೊಡುತ್ತೇನೆ, ತಾವು ಕಟ್ಟಿಸಿ ಕೊಡುತ್ತೀರಾ ?

ಶ್ರೀ ಕೆ. ಗಂಗಾಧರ.—ಗುಲ್ಬರ್ಗ ಜಿಲ್ಲೆಯಲ್ಲಿ ಸ್ಟೇಡಿಯಂ ಕಟ್ಟುವುದಕ್ಕೆ ೧೩ ಲಕ್ಷ ೫೦ ಸಾವಿರ ರೂಪಾಯಿಗಳ ಎಸ್ಟಿಮೇಟ್ ಇತ್ತು, ನಾವು ೧೪ ಲಕ್ಷ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡಿದ್ದೇವೆ. ಸರ್ಕಾರ ೫ ಲಕ್ಷ ಕೊಟ್ಟಿದೆ, ೧೦ ಲಕ್ಷ ೯೦ ಸಾವಿರ ಪಬ್ಲಿಕ್ ಕಾಂಟ್ರಿಬ್ಯೂಷನ್ ಮಾಡಿದ್ದಾರೆ. ಅಲ್ಲದೆ ಗುಲ್ಬರ್ಗದಲ್ಲಿ ಅಂಬೇಡ್ಕರ್ ಯುವಕ ಸೆಂಟರನ್ನು ಕಟ್ಟುತ್ತಿದ್ದಾರೆ, ಅದಕ್ಕೆ ಲಕ್ಷಾಂತರ ರೂಪಾಯಿ ಗಳನ್ನು ನಾವು ಕೊಡುತ್ತಾ ಇದ್ದೇವೆ.

SRI K. BHASKAR NAIDU.—The Hon. Minister said that he is going to construct 20 stadia and 3 stadia have already been completed. Are there swimming pools provided in the stadia.

ಶ್ರೀ ಕೆ. ಗಂಗಾಧರ.—ಸ್ವಿಮ್ಮಿಂಗ್ ಪೂಲ್ ಕೊಡಬೇಕು ಎಂದು ಮನಸ್ಸು ಇದ್ದರೂ ಕೂಡ ಈ ಸಂದರ್ಭದಲ್ಲಿ ಕೊಡುವುದು ಕಷ್ಟ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಜಿಲ್ಲಾ ಕೇಂದ್ರದಲ್ಲಿ ಮಾಡಿಕೊಟ್ಟ ನಂತರ ತಾಲ್ಲೂಕು ಕೇಂದ್ರದಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ, ಸಾಗರ ಸಬ್ ಡಿವಿಜನ್‌ನಲ್ಲಿ ಪಂತಿಗೆ ಕೊಡುತ್ತೇವೆ, ಅಲ್ಲಿ ಜಾಗ ಇದೆ. ಆದ್ದರಿಂದ ಏಷ್ಯನ್ ಗೇಮ್ಸ್ ಜ್ಞಾಪಕಾರ್ಥವಾಗಿ ಹೊಳೆನರಸೀಪುರದ ಜೊತೆಗೆ ಸಾಗರ ದಲ್ಲೂ ಕೊಡುತ್ತೀರಾ ಸ್ವಾಮಿ ?

ಶ್ರೀ ಕೆ. ಗಂಗಾಧರ.—ಅದನ್ನು ಪರಿಶೀಲನೆ ಮಾಡೋಣ.

MR. SPEAKER.—Now, the question hour is over.

QUESTIONS FOR ANSWERS ON THE DAY
(but not taken up)

Family Welfare Scheme in the State.

343 SRI K. H. ANUME GOWDA (Hassan). Will the Minister for Health & Family Welfare be pleased to state.—

(*a*) the percentage of increase of population every year in the State,